ಈ) ಈ ಯೋಜನೆಯನ್ನು ಇರಿಗೇಷನ್ ಮ್ಯಾನ್ಯುಯಲ್‌ನಲ್ಲಿರುವ ಮಾನದಂಡಗಳನ್ನು ಅಳವಡಿಸಿ ಖಾಸಗಿ ಕನ್ಸಲ್ಟೆಂಟ್ ಮೂಲಕ ವಿನ್ಯಾಸ ಮಾಡಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಆದರೆ, ಪ್ರಕೃತಿ ವಿಕೋಪದಿಂದ ಮತ್ತು ಸ್ಥಳೀಯ ಮಣ್ಣಿನ ಗುಣ ಲಕ್ಷಣಗಳಿಂದ ಉಂಟಾದ ಅನಿರೀಕ್ಷಿತ ಗುಡ್ಡದ ಜರಿತಗಳಿಂದ ನಾಲೆಗೆ ಹಾನಿ ಉಂಟಾಗಿದ್ದು, ಈ ಹಾನಿಯನ್ನು ಸರಿಪಡಿಸಲು ರಾಷ್ಟ್ರೀಯ ತಾಂತ್ರಿಕ ವಿದ್ಯಾಲಯ, ಕರ್ನಾಟಕ (NITK) ಸುರತ್ಕಲ್‌ನ ತಜ್ಞರು ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ಪ್ರೊಫೆಸರ್‌ರವರು ಸ್ಥಳ ಪರಿಶೀಲಿಸಿ ನೀಡಿರುವ ಸಲಹೆಯಂತೆ ವಿನ್ಯಾಸ ಮಾಡಿ, ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ನಾಲೆಗೆ ಉಂಟಾದ ಹಾನಿಯನ್ನು ರಾಷ್ಟ್ರೀಯ ತಾಂತ್ರಿಕ ವಿದ್ಯಾಲಯ, ಕರ್ನಾಟಕ (NITK) ಸುರತ್ಕಲ್‌ನ ತಜ್ಞರು ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ಪ್ರೊಫೆಸರ್ ಇವರಿಗೆ ತೋರಿಸಲಾಗಿದ್ದು, ಅವರ ಸಲಹೆಯಂತೆ ವಿನ್ಯಾಸ ಮಾಡಿ, ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

4327 (4941) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೆ ನಾಗರೀಕರು, ಹೋಟೆಲ್ ಉದ್ಯಮಗಳು, ಸಾರ್ವಜನಿಕರು ಸಮಸ್ಯೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಒಳಚರಂಡಿ ರಚನೆಗೆ ಸರ್ಕಾರ ಕುಂದಾಪುರ ಪುರಸಭೆಗೆ ಸಹಾಯಧನ ನೀಡುವುದೇ;

ಇ) ಹಾಗಿದ್ದಲ್ಲಿ, ಒಳಚರಂಡಿ ಮಾಡಲು ಅಂದಾಜು ಮಾಡಲಾಗಿರುವ ಹಣವೆಷ್ಟು; ಸದರಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.